ದಿನಾಂಕಃ 06-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು: ಎದುರುದಾರ ಪರ ಶ್ರೀ ಎಸ್.ಎ.ಎಸ್.ವಕೀಲರಿಂದ:</u>

ನಾನು ಬಿ.ಎಸ್ಸಿ ಪದವಿಧರ ಎಂದರೆ ಸರಿ. ನನಗೆ ಕನ್ನಡ ಮತ್ತು ಇಂಗ್ಲೀಷ ಭಾಷೆಗಳು ಓದಲು ಮತ್ತು ಬರೆಯಲು ಹಾಗೂ ಮಾತನಾಡಲು ಬರುತ್ತವೆ ಎಂದರೆ ಸರಿ. ನಾವು ಸಲ್ಲಿಸಿದ ಮೂಲ ದಾವೆ ಸಂ.62/2023. ಸದರಿ ದಾವೆಯನ್ನು ದಿನಾಂಕಃ 02-03-2023 ರಂದು ಸಲ್ಲಿಸಿರುತ್ತೇವೆ. ದಿನಾಂಕಃ 03-03-2023 ರಂದು ನ್ಯಾಯಾಲಯವು ಮಧ್ಯಂತರ ಅರ್ಜಿ ಸಂ.1 ರ ಮೇಲೆ ಆದೇಶ ಮಾಡಿರುತ್ತದೆ. ನಾನು ಸದರಿ ಆದೇಶದ ದೃಢೀಕೃತ ನಕಲು ಯಾವ ದಿನಾಂಕದಂದು ಪಡೆದಿದ್ದೆವು ಎಂದು ನನಗೆ ನೆನಪಿಲ್ಲ. ಸದರಿ ಆದೇಶದ ದೃಢೀಕೃತ ನಕಲು ಪಡೆದಿರುವುದು ನನಗೆ ಗೊತ್ತಿಲ್ಲ, ನಮ್ಮ ವಕೀಲರಿಗೆ ಗೊತ್ತು ಎಂದು ಹೇಳುತ್ತಾರೆ.

ನ್ಯಾಯಾಲಯದ ಮಧ್ಯಂತರ ಅರ್ಜಿ ಸಂ.1 ರ ಆದೇಶದ ಪ್ರತಿಯನ್ನು ಎದುರುದಾರನಿಗೆ ಕಳುಹಿಸಿದ್ದು, ಎದುರುದಾರನು ದಿನಾಂಕಃ 08-03-2023 ರಂದು ಪಡೆದಿರುತ್ತಾನೆ. ಪ್ರತಿವಾದಿಗೆ ಕಳುಹಿಸಿದ ಅಂಚೆ ಕವರನಲ್ಲಿ ದಾವೆ ಮಾಡಿದ ದಾಖಲಾತಿಗಳು ಮತ್ತು ಪ್ರಮಾಣ ಪತ್ರ ಕಳುಹಿಸಿದ್ದೆವು. ಅದರ ಜೊತೆಗೆ ಮೂಲ ದವೆ ಸಂ.62/2023 ರ ಆದೇಶದ ಪ್ರತಿಯನ್ನು ಕಳುಹಿಸಿರುತ್ತೇವೆ. ಆ ಬಗ್ಗೆ ಪ್ರತಿವಾದಿ ಪಡೆದುಕೊಂಡಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ಮೂಲ ದಾವೆ ಸಂ.62/2023 ರ ಆದೇಶದ ಪ್ರತಿ ಯಾವ ದಿನಾಂಕದಂದು ಪಡೆದು ಎದುರುದಾರನಿಗೆ ಕಳುಹಿಸಿರುತ್ತೇವೆ ಎಂದು ಗೊತ್ತಿಲ್ಲ. ಮೂಲ ದಾವಾ ಸಂ.62/2023 ರ ಆದೇಶದ ಪ್ರತಿ ಪಡೆಯಲು ಮೊದಲನೆಯ ಸಲ ದಿನಾಂಕಃ 07-06-2023 ರಂದು ಅರ್ಜಿ ಸಲ್ಲಿಸಿ, ಅದೇ ದಿನ ಪಡೆದಿರುತ್ತೇವೆ ಎಂದರೆ ಸರಿ. ದಿನಾಂಕಃ 07-06-2023 ರ ಮೊದಲು ನಾನು ನ್ಯಾಯಾಲಯದ ಆದೇಶದ ಪ್ರತಿಯನ್ನು ಪಡೆದಿರುವುದಿಲ್ಲ. ದಿನಾಂಕಃ 03-03-2023 ರಂದು ನ್ಯಾಯಾಲಯದ ಆದೇಶವಾದ ನಂತರ, ದಿನಾಂಕಃ 04-03-2023 ರಂದು ದಾಖಲೆಗಳನ್ನು ಪ್ರತಿವಾದಿಯರಿಗೆ ಕಳುಹಿಸಿರುತ್ತೇನೆ ಎಂದರೆ ಸರಿ. ದಿನಾಂಕಃ 04-03-2023 ರಂದು ಆದೇಶದ ದೃಢೀಕೃತ ನಕಲು ನಮ್ಮ ಹತ್ತಿರ ಇರಲಿಲ್ಲ ಎಂದರೆ ಸರಿ. ಮಧ್ಯಂತರ ಅರ್ಜಿ ಸಂ.1 ರ ಮೇಲಿನ ಆದೇಶದ ನಂತರ ದಿನಾಂಕಃ 04-03-2023 ರಂದು ನಿಪಿ-1 ರೊಂದಿಗೆ ಸಲ್ಲಿಸಿದ

ಅರ್ಜಿ ಮತ್ತು ಪ್ರಮಾಣ ಪತ್ರದ ಪ್ರತಿಗಳನ್ನು ಪ್ರತಿವಾದಿಗೆ ಕಳುಹಿಸಿರುತ್ತೇವೆ ಎಂದರೆ ಸರಿ. ಮಧ್ಯಂತರ ಅರ್ಜಿ ಮತ್ತ ಅದರ ಜೊತೆಗಿನ ಪ್ರಮಾಣ ಪತ್ರ ಹೊರತುಪಡಿಸಿ ಪ್ರತಿವಾದಿಗೆ ಬೇರೆ ಯಾವುದೇ ದಾಖಲೆಗಳನ್ನು ಅಂಚೆಯ ಮೂಲಕ ಕಳುಹಿಸಿಲ್ಲ ಎಂದರೆ ಸರಿ. ಮಧ್ಯಂತರ ಅರ್ಜಿ ಸಂ.1 ಮತ್ತು ಪ್ರಮಾಣ ಪತ್ರದ ಮೇಲೆ ದಾವಾ ಸಂಖ್ಯೆ ನಮೂದು ಮಾಡದೇ ಪ್ರತಿವಾದಿಗೆ ಕಳುಹಿಸಿರುತ್ತೇವೆ ಎಂದರೆ ಸರಿ. ಆ ಕಾರಣಕ್ಕಾಗಿ ಮೂಲ ದಾವೆ ಸಂಖ್ಯೆ ಮತ್ತು ಯಾವ ಕಾರಣಕ್ಕಾಗಿ ಕಳುಹಿಸಿರುತ್ತಾರೆ ಎಂದು ಪ್ರತಿವಾದಿಗೆ ಮಾಹಿತಿ ಇರಲಿಲ್ಲ ಎಂದರೆ ಸರಿ.

ದಿನಾಂಕಃ 04-03-2023 ರಂದು ನಿಪಿ-2 ರಂತೆ ಪ್ರಮಾಣ ಪತ್ರವನ್ನು ಪ್ರತಿವಾದಿಗೆ ಕಳುಹಿಸಿರುತ್ತೇವೆ ಎಂದರೆ ಸರಿ. ನಿಪಿ-2 ರೊಂದಿಗೆ ಪ್ರತಿವಾದಿಯರಿಗೆ ಯಾವ ಪ್ರಕರಣದ ದಾಖಲೆಗಳನ್ನು ಕಳುಹಿಸಿರುತ್ತೇವೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ-2 ರಲ್ಲಿ ಯಾವ ದಾಖಲೆಗಳನ್ನು ಕಳುಹಿಸಿರುತ್ತೇವೆ ಎಂದು ಕಂಡುಬರುವುದಿಲ್ಲ ಎಂದರೆ ಸರಿ. 2023 ರಲ್ಲಿ ಒಂದು ಪತ್ರ ಕಳುಹಿಸಲು ಕನಿಷ್ಠ ರೂ.25/- ಅಂಚೆ ಚೀಟಿ ಬೇಕಾಗುತ್ತಿತ್ತು ಎಂದರೆ ಸರಿ. ರೂ.25/- ಅಂಚೆ ಚೀಟಿ ಅಂಟಿಸಿ ಸುಮಾರು 20 ಗ್ರಾಂ ನ ತೂಕದ ದಾಖಲೆಗಳನ್ನು ಮಾತ್ರ ಕಳುಹಿಸಿರುತ್ತೇನೆ ಎಂದರೆ ಗೊತ್ತಿಲ್ಲ. 20 ಗ್ರಾಂ ಗಿಂತ ಹೆಚ್ಚಿನ ತೂಕದ ದಾಖಲೆಗಳನ್ನು ಕಳುಹಿಸಲು ಸಾಧ್ಯ ಇರಲಿಲ್ಲ ಎಂದರೆ ಸರಿ. ನ್ಯಾಯಾಲಯದ ದಿನಾಂಕಃ 03-03-2023 ರ ಆದೇಶ, ಪ್ರತಿವಾದಿಗೆ ದಿನಾಂಕಃ 08-03-2023 ರಂದು ಗಮನಕ್ಕೆ ಬಂದಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 08-03-2023 ರಂದು ಪ್ರತಿವಾದಿ ಪಡೆದಿರುವ ದಾಖಲೆಗಳಲ್ಲಿ ನ್ಯಾಯಾಲಯದ ತಡೆಯಾಜ್ಞೆ ಇತ್ತು ಎಂದು ಯಾವುದೇ ನೋಟಿಸ ಇರಲಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶವಾಗಿರುವ ಕುರಿತು ನೋಟಿಸ ಸದರಿ ಅಂಚೆ ಕವರನಲ್ಲಿ ಪ್ರತಿವಾದಿಗೆ ಕಳುಹಿಸಿರುವುದು ಗೊತ್ತಿಲ್ಲ. ದಿನಾಂಕಃ 08-03-2023 ರಂದು ಮೂಲ ದಾವೆ ಸಂ.62/2023 ರಲ್ಲಿ ಮಧ್ಯಂತರ ಅರ್ಜಿ ಸಂ.1 ರ ಮೇಲಿನ ಆದೇಶದ ಬಗ್ಗೆ ಪ್ರತಿವಾದಿಗೆ ಯಾವುದೇ ಗಮನಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ಸದರಿ ಆದೇಶದ ಮಾಹಿತಿಯನ್ನು ಪ್ರತಿವಾದಿಯ ಗಮನಕ್ಕೆ ತರಲು ನಾವು ಯಾವುದೇ ಪ್ರಯತ್ನ ಮಾಡಿಲ್ಲ ಎಂದರೆ ಗೊತ್ತಿಲ್ಲ.

ದಿನಾಂಕಃ 27-03-2023 ರಂದು ಪ್ರತಿವಾದಿ ಅಸಲು ದಾವಾ ಸಂ.62/2023 ರಲ್ಲಿ ವಕಾಲತ್ ಸಲ್ಲಿಸಿದ ನಂತರ ದೃಢೀಕೃತ ನಕಲು ಪಡೆಯಲು ಅದೇ ದಿನ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ದಿನಾಂಕಃ 27-03-2023 ರಂದು ದೃಢೀಕೃತ ನಕಲುಗಳನ್ನು ಪಡೆಯುವವರೆಗೆ ಪ್ರತಿವಾದಿಗೆ ನ್ಯಾಯಾಲಯದ ಮಧ್ಯಂತರ ಅರ್ಜಿಯ ಮೇಲೆ ಮಾಡಿದ ಆದೇಶದ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲೆ ತೋರಿಸಿ, ಅದು ನ್ಯಾಯಾಲಯದಿಂದ ಪ್ರತಿವಾದಿಯರಿಗೆ ಕಳುಹಿಸಿದ ದಾವಾ ಸಮನ್ಸ ಮತ್ತು ಮಧ್ಯಂತರ ಅರ್ಜಿ ಸಂ.1 ರ ಆದೇಶದ ಪ್ರತಿ ಇರುತ್ತದೆ ಎಂದು ಗುರುತಿಸಿರುವುದರಿಂದ ನಿಆರ್-1 ಎಂದು ಗುರುತಿಸಲಾಯಿತು. ನಿಆರ್-1 ರಂತೆ ಸದರಿದಾಖಲೆಯನ್ನು ದಿನಾಂಕಃ 20-03-2023 ರಂದು ತಯಾರಿಸಿ, ದಿನಾಂಕಃ 23-03-2023 ರಂದು ಶಿರಸ್ತೇದಾರರ ಸಹಿ ಹಾಕಿಸಿ ಕಳುಹಿಸಿದ್ದು ಇರುತ್ತದೆ ಎಂದರೆ ಸರಿ. ದಿನಾಂಕಃ 23-03-2023 ರ ಮೊದಲು ದಾವಾ ಸಮನ್ಸ ಮತ್ತು ನೋಟಿಸ ಪ್ರತಿವಾದಿಗೆ ಮುಟ್ಟಲು ಸಾಧ್ಯವಿಲ್ಲ ಎಂದರೆ ನನಗೆ ಗೊತ್ತಿಲ್ಲ.

ದಿನಾಂಕಃ 09-03-2023 ರಂದು ನಿಪಿ-4 ರಂತೆ ತೋರ ಅಡಮಾನ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ಹೇಳಿದ್ದು, ಆ ದಿನ ನ್ಯಾಯಾಲಯದ ಆದೇಶದ ಬಗ್ಗೆ ಪ್ರತಿವಾದಿಗೆ ಮಾಹಿತಿ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರಪಡಿಸಿಲ್ಲ ಎಂದರೆ ಗೊತ್ತಿಲ್ಲ. ಪ್ರತಿವಾದಿಯು ನ್ಯಾಯಾಲಯದ ಆದೇಶ ಉಲ್ಲಂಘಣೆ ಮಾಡಿರುತ್ತಾನೆ ಎಂದು, ಅವರಿಗೆ ಹೆದರಿಸುವ ಉದ್ದೇಶದಿಂದ ಸುಳ್ಳು ಸಂಗತಿಗಳನ್ನು ಹೇಳಿಕೊಂಡು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ತೋರ ಅಡಮಾನ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ಹೇಳಿದ ಜಮೀನು ಸರ್ವೆ ನಂ.221/1/1 ಕ್ಷೇತ್ರ 36 ಗುಂಟೆ, ಸಸಾಲಟ್ಟಿ ಗ್ರಾಮದ ಜಮೀನು ಇರುತ್ತದೆ. ದಿನಾಂಕಃ 09-09-2023 ರಂದು ಸದರಿ ಆಸ್ತಿ ಎದುರುದಾರನ ಹೆಸರಿನಲ್ಲಿ ಇತ್ತು. ಇವತ್ತಿಗೂ ಸದರಿ ಆಸ್ತಿ ಎದುರುದಾರನ ಹೆಸರಿನಲ್ಲಿ ಇರುತ್ತದೆ. ಶೇಗುಣಸಿ ಗ್ರಾಮದಲ್ಲಿ ಇರುವ ಆಸ್ತಿ ಮಾರಾಟ ಮಾಡಿ ಸದರಿ ಆಸ್ತಿಯನ್ನು ಎದುರುದಾರನ ಹೆಸರಿನಲ್ಲಿ ರಾಯಪ್ಪ ಇವರು ಖರೀದಿ 2004 ರಲ್ಲಿ ಮಾಡಿರುತ್ತಾರೆ. ಆ ಬಗ್ಗೆ ದಾವೆ ಸಲ್ಲಿಸುವ ಮೊದಲು ಹಿರಿಯರ ಸಮಕ್ಷಮ ಯಾವುದೇ ನ್ಯಾಯ ಪಂಚಾಯತಿ ಮಾಡಿರುವುದಿಲ್ಲ. 2004 ರಲ್ಲಿ ನನ್ನ ತಂದೆ ಜೀವಂತ ಇದ್ದರು. ಆ ಬಗ್ಗೆ ನನ್ನ ತಂದೆಗೆ ಮಾಹಿತಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಎದುರುದಾರನ ಹೆಸರಿನಲ್ಲಿ ದಾವಾ ಆಸ್ತಿ ಇರುವುದು ನನಗೆ 2018 ರಲ್ಲಿ ಗೊತ್ತಾಗಿರುತ್ತದೆ. ನನ್ನ ತಾಯಿಗೆ ಯಾವಾಗ

ಗೊತ್ತಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ, ಏಕೆಂದರೆ ನಾನು ಕೇಳಿಲ್ಲ. ವಾದ ಪತ್ರದ ವಿಷಯಗಳು ನನ್ನ ತಾಯಿಗೆ ನನಗಿಂತ ಚೆನ್ನಾಗಿ ಮಾಹಿತಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಸಾಕ್ಷಿ ಹೇಳಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಅವರ ಸಾಕ್ಷಿ ಮಾಡಿಸದೇ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಸರ್ವೆ ನಂ.221/1/1 ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ, ಇತರ ಪ್ರತಿವಾದಿಯರಿಗೆ ಅಥವಾ ವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡಲು ಹಾಗೂ ಅವರಿಂದ ಏನಾದರೂ ಪಡೆಯುವ ಉದ್ದೇಶದಿಂದ ಸುಳ್ಳು ಮಾಹಿತಿಯನ್ನು ನ್ಯಾಯಾಲಯಕ್ಕೆ ನೀಡಿ ಏಕತರ್ಫೆ ತಡೆಯಾಜ್ಞೆ ಪಡೆದಿರುತ್ತೇವೆ ಎಂದರೆ ಸರಿಯಲ್ಲ.

ಮೂಲ ದಾವೆ ಸಂ.62/2023 ರಲ್ಲಿ ತಡೆಯಾಜ್ಞೆಯನ್ನು ಎದುರುದಾರ, ಸದಾಶಿವ ತಂದೆ ರಾಯಪ್ಪ ಕಾಲತಿಪ್ಪಿ ಬಸವ್ವ ರಾಯಪ್ಪ ಕಾಲತಿಪ್ಪಿ ಮತ್ತು ಪ್ರಕಾಶ ರಾಯಪ್ಪ ಕಾಲತಿಪ್ಪಿ ಇವರ ವಿರುದ್ಧ ಪಡೆದಿದ್ದೆನು. 17 ನೇ ಪ್ರತಿವಾದಿ, ದಾವೆ ಚಾಲ್ತಿಯಲ್ಲಿರುವಾಗ ಜಮೀನು ಸರ್ವೆ ನಂ.123/1 ಬಿ ನೇದ್ದನ್ನು ಅಡಮಾನ ಇಟ್ಟು ಟ್ರ್ಯಾಕ್ಟರ ಖರೀದಿ ಮಾಡಿರುತ್ತಾರೆ ಎಂದರೆ ಸರಿ. 17 ನೇ ಪ್ರತಿವಾದಿ ನ್ಯಾಯಾಲಯದ ಆದೇಶ ಉಲ್ಲಂಘಣೆ ಮಾಡಿ ಜಮೀನು ಸರ್ವೆ ನಂ.123/1 ಬಿ ಅಡಮಾನ ಮಾಡಿರುವುದು ನನಗೆ ಗೊತ್ತಿಲ್ಲ. ಆ ಬಗ್ಗೆ ನನಗೆ ಸಂಪೂರ್ಣವಾದ ಮಾಹಿತಿ ಇದೆ, ಆದರೂ ಅವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡಲು ಈ ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2025.09.06 17:00:06 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ